ಬಳಸಿ ಇಟ್ಟಿಗೆಗಳನ್ನು ಜೋಡಿಸಬಹುದು. ಆಗ ಇಟ್ಟಿಗೆಗಳ ನಡುವೆ ಎಡೆ ಇರುವುದಿಲ್ಲ. ಮಣ್ಣು ತೋಡುವುದೇ ಬಹಳ ದೊಡ್ಡ ಕೆಲಸ. ತೋಡಿ ಎತ್ತಿಹಾಕಿದ ಮಣ್ಣಿನಿಂದ ಕೆರೆಯ ಸುತ್ತಲೂ ಒಂದು ಅಗಲವಾದ ತಗ್ಗು ದಂಡೆಯನ್ನು ನಿರ್ಮಿಸಬಹುದು. ಅದು ಇಟ್ಟಿಗೆ ದಂಡೆಯ ಹೊರಗಡೆ ಅದಕ್ಕೆ ಹೊಂದಿಕೊಂಡಿರುವ ಒಂದು ಉಪದಂಡೆಯಾಗುತ್ತದೆ. ಕೆರೆಯಿಂದ ಎತ್ತಿದ ಮಣ್ಣನ್ನು ಆ ದಂಡೆಯ ಹೊರಗಡೆ ಹರಡಬಹುದು.

‘ಸಿಕ್ಕಿದಷ್ಟು ಕೆಲಸಗಾರರನ್ನು ಉಪಯೋಗಿಸಿಕೊಂಡು ನಾಳೆಯೇ ಮಣ್ಣು ಎತ್ತುವ ಕೆಲಸ ಆರಂಭಿಸೋಣ. ಒಂದೆರಡು ದಿನಗಳಲ್ಲಿ ಹೆಚ್ಚು ಕೆಲಸಗಾರು ಸಿಗಬಹುದು. ನರಹರಿಯ ಮನೆಯ ಕೆಲಸ ಮಾಡಿದವರು ಸಿಕ್ಕೇ ಸಿಗುತ್ತಾರೆ’ ಎಂದ ಇಂಜಿನಿಯರ್ ಮಹಾದೇವ.

‘ಕೆರೆಯ ಅಡಿಯ ನೆಲದಲ್ಲಿ ನೀರು ಇಂಗುವುದನ್ನು ತಡೆಯಲು ಅಥವಾ ಮಿತಗೊಳಿಸಲು ಒಂದು ತಂತ್ರ ಇದೆ ಎಂದು ಜನರು ಹೇಳುವುದನ್ನು ಕೇಳಿದ್ದೇನೆ. ಅದನ್ನು ನಮ್ಮ ಕೆರೆಗೆ ಬಳಸಬಹುದಲ್ಲವೆ?’ ಅಭಿ ಕೇಳಿದ,

‘ಖಂಡಿತವಾಗಿಯೂ ಬಳಸಬಹುದು’ ಎಂದರು ಇಂಜಿನಿಯರ್ ಮಹಾದೇವ.

35

ಒಂದು ದಿನ ರಾತ್ರಿ ಹತ್ತು ಗಂಟೆಯ ಹೊತ್ತಿನ ಅರೆಗತ್ತಲಲ್ಲಿ ಒಬ್ಬ ಗಂಡಸು ಮತ್ತು ಹೆಂಗಸು ಆನೆಮಹಲ್ ಮನೆಯ ಮುಂದೆ ಕಾಣಿಸಿ ಕೊಂಡರು. ಆಗಷ್ಟೇ ಯಾವುದೋ ಚಿಕ್ಕ ಕೆಲಸಕ್ಕೆ ಮನೆಯಿಂದ ಹೊರಬಂದಿದ್ದ ಅಭಿಗೆ ದಾರಿದ್ರ್ಯದಲ್ಲಿ ಸೊರಗಿ ಸೋತು ಸುಣ್ಣವಾಗಿದ್ದ ಅವರನ್ನು ಅಮರೇಶ ಮತ್ತು ಸನ್ಮತಿ ಎಂದು ಗುರುತು ಹಿಡಿಯಲು ಸ್ವಲ್ಪ ಹೊತ್ತು ಬೇಕಾಯಿತು. ಇಬ್ಬರೂ ಅಭಿಯ ಕಾಲಿಗೆ ಬಿದ್ದು, ‘ಕ್ಷಮಿಸಿ. ನಮಗೆ ದಯವಿಟ್ಟು ಆಶ್ರಯ ನೀಡಿ, ನಿಮ್ಮ ತೋಟದಲ್ಲಿ ಕೂಲಿ ಕೆಲಸ ಮಾಡಿಕೊಂಡು ಬದುಕುತ್ತೇವೆ’ ಎಂದಳು ಸನ್ಮತಿ. ಇಬ್ಬರೂ ಕಣ್ಣೀರು ಹರಿಸಿದರು.

‘ದಯವಿಟ್ಟು ಏನೂ ಶಬ್ದ ಮಾಡದೆ, ಈ ಮನೆಯ ಇತರರ ಕಣ್ಣಿಗೆ ಬೀಳುವ ಮೊದಲು ಹೊರಟು ಹೋಗಿ. ನಿಮ್ಮನ್ನು ಜೀವಂತ ಕಾಣುವ ಮನಸ್ಸು ಇಲ್ಲಿ ಯಾರಿಗೂ ಇಲ್ಲ. ಈಗ ಅಪ್ಪನ ಬಳಿ ಕೋವಿ ಇದೆ. ನಿಮ್ಮನ್ನು ಕೊಂದು ಅವರು ಜೈಲಿಗೆ ಹೋಗುವುದು ಬೇಡ. ಬೇಗ ತೊಲಗಿ. ಪ್ಲೀಸ್, ಬೇಗ ಹೋಗಿ’ ಎಂದು ಒಳಹೋಗಿ ಮುಷ್ಟಿಯಲ್ಲಿ ಕೆಲವು ನೋಟುಗಳನ್ನು ಹಿಡಿದುಕೊಂಡು ಬಂದ ಅಭಿ, ‘ತೆಗೆದುಕೊಳ್ಳಿ ಹೋಗುವ ಖರ್ಚು’ ಎಂದು ಒಂದಷ್ಟು ಹಣ ತೆಗೆದು ಅವರ ಕೈಗೆ ಹಾಕಿ, ‘ಎಲ್ಲಿಯಾದರೂ ಹೋಗಿ, ಸಾಧ್ಯವಿದ್ದರೆ, ಜೀವಿಸುವ ಪ್ರಯತ್ನ ಮಾಡಿ. ಪ್ಲೀಸ್ ಹೋಗಿ ಬೇಗ’ ಎಂದ ಅಭಿ.

ಅಮರೇಶ ಮತ್ತು ಸನ್ಮತಿ ಬಂದದ್ದು ಹೋದದ್ದು ಯಾರಿಗೂ ತಿಳಿಯಲಿಲ್ಲ. ಅಭಿ ಯಾರಿಗೂ ಹೇಳಲಿಲ್ಲ.

ಸ್ವಾವಲಂಬಿ ದೇಶದ ಕೆರೆ ಸಿದ್ಧವಾಗಿ ಉಪಯೋಗಕ್ಕೆ ಬರಲು ಒಟ್ಟು ಮೂರು ವರ್ಷ ಬೇಕಾಯಿತು. ಅನಂತರ ಆರು ತಿಂಗಳ ಬಳಿಕ, ಅಭಿ ಮತ್ತು ಮುರಾರಿ ಚರ್ಚಿಸಿ ಇಸ್ರೇಲಿಯನ್ ಪ್ರೊಫೆಸರ್ ಬೆನ್ಯಮ್‌ಗೆ ಒಂದು ಪತ್ರ ಬರೆದರು:

‘ನಾವು ನಮ್ಮ ಗ್ರಾಮದಲ್ಲಿ 40,46,856 ಸ್ಕ್ವೇರ್ ಮೀಟರ್ ವಿಸ್ತೀರ್ಣದ ಒಂದು ಸ್ವಾವಲಂಬಿ ದೇಶವನ್ನೇ ನಿರ್ಮಿಸಿದ್ದೇವೆ. ಇದರಲ್ಲಿ ಇರಬೇಕಾದ ಸಕಲವೂ ಇದೆ. ಯಾವುದು ಇಲ್ಲ ಎಂದು ನೀವು ನೋಡಿ ಹೇಳಬೇಕು. ನೀವು ನೋಡಿ, ‘ಚೆನ್ನಾಗಿದೆ’ ಎಂದರೆ ಮಾತ್ರ ಇದು ಪರಿಪೂರ್ಣ ‘ಸ್ವಾವಲಂಬಿ ದೇಶ’ ಆಗುತ್ತದೆ. ಕೇವಲ ಚೆನ್ನಾಗಿದೆ ಎಂದರೆ ಸಾಲದು, ನಿಮ್ಮ ಅಭಿಪ್ರಾಯ ಮತ್ತು ಸಲಹೆಗಳು ಕೂಡ ನಮಗೆ ಅಗತ್ಯ. ಯಾವಾಗ ಬೆಂಗಳೂರಿನಲ್ಲಿ ಬಂದಿಳಿಯುತ್ತೀರಿ ಎಂದು ತಿಳಿಸಿದರೆ, ಅಲ್ಲಿಗೆ ಬಂದು ನಮ್ಮ ಸ್ವಾವಲಂಬಿ ದೇಶಕ್ಕೆ ನಿಮ್ಮನ್ನು ಕರೆದುಕೊಂಡು  ಹೋಗುತ್ತೇವೆ. ನೀವು ಹೇಳಿರುವ ಹಾಗೆ ಮೂರೋ ನಾಲ್ಕು ಮಂದಿಯ ಜೊತೆ ಮತ್ತಷ್ಟು ಜನ ಬಂದರೂ ನಾವು ತುಂಬು ಪ್ರೀತಿಯಿಂದ ಬರಮಾಡಿಕೊಳ್ಳುತ್ತೇವೆ. ನೀವು ಹೇಳಿದಂತೆ ಫೆಬ್ರವರಿಯಲ್ಲೇ ಬನ್ನಿ. ದಯವಿಟ್ಟು ನಮ್ಮ ಒಂದು ಅಪೇಕ್ಷೆಯನ್ನು ನೀವು ಮನ್ನಿಸಬೇಕು. ನಾವು ನಿಮಗೆ ಒಂದು ಆಮಂತ್ರಣ ಪತ್ರ ಮತ್ತು ಜೊತೆಗೆ 'ಸ್ವಾವಲಂಬಿ ದೇಶ'ದ ಕೆಲವು ಫೋಟೊಗಳನ್ನು ಕಳಿಸುತ್ತೇವೆ.

‘ಸ್ವಾವಲಂಬಿ ದೇಶ’ದಲ್ಲಿ ಒಂದು ಹಬ್ಬ ನಡೆಸುವ ನಿರ್ಧಾರ ಮಾಡಿದ್ದೇವೆ. ಅದು ಮುಖ್ಯವಾಗಿ, ಈ ಗ್ರಾಮದ ಜನರ ಇಚ್ಛೆ. ಅದು ಆರಂಭವಾಗುವ ದಿನ ನೀವು ಇಲ್ಲಿಗೆ ಬಂದರೆ ನಮಗೆ ತುಂಬಾ ಸಂತೋಷವಾಗುತ್ತದೆ. ನಿಮಗೂ ಅದು ನಮಗೂ ಒಂದು ಅವಿಸ್ಮರಣೀಯವಾದ ದಿನವಾಗಲಿ. ನಿಮ್ಮ ದೇಶದ ನೆಲ ಜಲ ಅರಣ್ಯ ಮತ್ತು ಇತರ ನಿಸರ್ಗ ದೃಶ್ಯಗಳನ್ನು ನಮ್ಮ ಸ್ವಾವಲಂಬಿ ದೇಶದಲ್ಲಿ ಎಲ್ಲಾ ಕಡೆ ಜೋಡಿಸಿಡುತ್ತೇವೆ. ಮಾಹಿತಿಯನ್ನು ಮುದ್ರಿಸಿ ಚಿತ್ರಗಳಿಗೆ ಜೋಡಿಸುತ್ತೇವೆ. ಚಿತ್ರಗಳನ್ನು ನೋಡಿ ಮಾಹಿತಿಯನ್ನು ಓದುವ ಮೂಲಕ ಹಿರಿಯರು ಕಿರಿಯರು ಎಲ್ಲರೂ ಬಹಳ ಕಲಿತುಕೊಳ್ಳುತ್ತಾರೆ.’

ಈ ಊರಿನ ಜನ ಒಂದು ಇಡೀ ದಿನ ಜಾನಪದ ಹಾಡು ಮತ್ತು ನೃತ್ಯದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತಾರೆ. ಈ ಸಮಾರಂಭದ ಸಚಿತ್ರ ಸುದ್ದಿ ಮತ್ತು ಮಾಹಿತಿ ಇಡೀ ಭಾರತಕ್ಕೆ ಮಾತ್ರವಲ್ಲ ಇಡೀ ಜಗತ್ತಿಗೆ ರವಾನೆಯಾಗುತ್ತದೆ, ಇಸ್ರೇಲ್ ಮತ್ತು ಭಾರತ ಇನ್ನಷ್ಟು ಹತ್ತಿರ ಬರುತ್ತದೆ ಎಂದು ಹೇಳಬೇಕಾಗಿಯೇ ಇಲ್ಲ. ಸ್ವಾವಲಂಬಿ ದೇಶಕ್ಕೆ ನಿಮಗೆ ಪ್ರೀತಿಯ ಸ್ವಾಗತ’

ಪ್ರೊಫೆಸರ್ ಬೆನ್ಯಮ್‌ನಿಂದ ಉತ್ತರ ಬಂತು: ‘ಖಂಡಿತ ಬರುತ್ತೇವೆ. ಇನ್ನು ಮೂರು ತಿಂಗಳ ನಂತರ, ಫೆಬ್ರವರಿಯಲ್ಲಿ ಪ್ರೊಫೆಸರ್ ಚನ್ಯಮ್, ನನ್ನ ಹೆಂಡತಿ ಗೋಲ್ಡಾ ಮೂವರು ಬರುತ್ತೇವೆ. ಫೆಬ್ರವರಿ ಯಾಕೆ ನಮ್ಮ ಆಯ್ಕೆಯಾಗಿದೆಯೆಂದರೆ, ಆಗ ನಿಮ್ಮ ದೇಶದಲ್ಲಿಯೂ ನಮ್ಮ ದೇಶದಲ್ಲಿಯೂ ಸುಮಾರಾಗಿ ಒಂದೇ ರೀತಿಯ ಹವೆಯಿರುತ್ತದೆ. ನಿಮ್ಮಲ್ಲಿ ಸ್ವಲ್ಪ ತಂಪಿರುತ್ತದೆ, ನಮ್ಮಲ್ಲಿ ಸ್ವಲ್ಪ ಮಳೆಯಿರುತ್ತದೆ’.

‘ಸ್ವಾವಲಂಬಿ ದೇಶ ಎಂಬ ಹೆಸರೇ ಅದ್ಭುತವಾಗಿದೆ, ಅನನ್ಯವಾಗಿದೆ. ‘ನೀವು ನಿರ್ಮಿಸಿರುವ ‘ಸ್ವಾವಲಂಬಿ ದೇಶ’ದಲ್ಲಿ ಎರಡು ದಿನ ಇದ್ದು ಅನಂತರ ಒಂದು ವಾರ ನಿಮ್ಮ ದೇಶದಲ್ಲಿ ಸಂಚರಿಸಿ ಇಸ್ರೇಲಿಗೆ ಮರಳುತ್ತೇವೆ’ ಎಂದು ಪ್ರೊಫೆಸರ್ ಬೆನ್ಯಮ್‌ನಿಂದ ಉತ್ತರ ಬಂತು.

ಫೆಬ್ರವರಿ ಏಳರಂದು ಇಸ್ರೇಲಿನಿಂದ ಐದು ಮಂದಿ ಬಂದರು. ಅವರನ್ನು ಸ್ವಾಗತಿಸಲು ‘ಸ್ವಾವಲಂಬಿ ದೇಶ'ದ ಜೊತೆ ಆನೆಮಹಲು,  ಸಕಲೇಶಪುರ ನಗರ ಮಾತ್ರವಲ್ಲ, ಇಡೀ ಊರೇ ನೆರೆಯಿತು.

(ಮುಗಿಯಿತು)

## ಇಲ್ಲಿಯವರೆಗೆ



ಯುನಿವರ್ಸಿಟಿಯಿಂದ ಫೆಲೊಶಿಪ್ ಪಡೆದು ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಅಭಿ, ನರಹರಿ ಜತೆಗೆ ಪ್ರೊ.ಅಡಿನ ಹಾಗೂ ಬೆನ್ಯಮ್ ಚರ್ಚೆ ನಡೆಸುತ್ತಾರೆ. ಭೂ ಅಭಿವೃದ್ಧಿಗಾಗಿ ಮತ್ತೆ ಐದು ಎಕರೆ ಜಮೀನು ನೀಡುವುದಾಗಿ ಗಣಪತಿ ಹೇಳುತ್ತಾರೆ. ಮುರಾರಿ ಅಭಿ ಸೇರಿ ಆನೆಮಹಲಿನಲ್ಲಿ ಸಭೆ ನಡೆಸಿ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ನಡೆಸುತ್ತಾರೆ. ‘ಸ್ವಾವಲಂಬಿ ಕುಟುಂಬ’ ಎಂದು ಗುರುತಿಸಿಕೊಳ್ಳುವ ಆನೆಮಹಲ್ ಮನೆಯ ಮನೆಯ ಸದಸ್ಯರಾದ ನರಹರಿ, ಅಭಿ, ಮುರಾರಿ, ಮುರಾರಿಯ ಹೆಂಡತಿ ನಳಿನಿ, ಮಕ್ಕಳು ಶರ್ವಾಣಿ ಮತ್ತು ಶಿವಗಿರಿ ಒಟ್ಟು ಆರು ಮಂದಿ ಒಳಗಿನ ಹಾಲ್‌ನಲ್ಲಿ ಸಭೆ ಸೇರುತ್ತಾರೆ.